# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಬಿ ಜಿ ಪಾಟೀಲ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 531
ಉತ್ತರಿಸಬೇಕಾದ ದಿನಾಂಕ : 11-07-2023
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳಿಗೆ ರಾಜ್ಯ ಅಪೆಕ್ಸ್ ಬ್ಯಾಂಕ್ ಮುಖಾಂತರ ನೀಡಿರುವ ಸಾಲಗಳ ಮೊತ್ತವೆಷ್ಟು; ಈ ಸಾಲಗಳನ್ನು ಯಾವ ಬಡ್ಡಿದರದಲ್ಲಿ ನೀಡಲಾಗುತ್ತಿದೆ; (ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮುಖಾಂತರ ನೀಡಿರುವ ಅಲ್ಪಾವಧಿ ಹಾಗೂ ಮಧ್ಯಮಾವಧಿ ಕೃಷಿ ಸಾಲದ ಮೊತ್ತ ಮತ್ತು ಬಡ್ಡಿ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ಸದರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಯಾವ ಬಡ್ಡಿದರದಲ್ಲಿ ರೈತರಿಗೆ ಸಾಲ ನೀಡುತ್ತಿವೆ; | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಪ್ಯಾಕ್ಸ್‌ಗಳ ಮೂಲಕ ನಿಗಧಿತ ಅವಧಿಯಲ್ಲಿ ಮರುಪಾವತಿಸುವ ರೈತರಿಗೆ ರೂ.3.00ಲಕ್ಷಗಳವರೆಗೆ ಬೆಳೆ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ಹಾಗೂ ರೂ.10.00ಲಕ್ಷಗಳವರೆಗಿನ ಮಧ್ಯಮಾವಧಿ/ದೀರ್ಘಾವಧಿ ಸಾಲವನ್ನು ಶೇ.3ರ ಬಡ್ಡಿದರದಲ್ಲಿ ನೀಡುತ್ತಿವೆ.<br><br>2023-24ನೇ ಸಾಲಿನ ಆಯವ್ಯಯದಲ್ಲಿ ಅಲ್ಪಾವಧಿ ಕೃಷಿ ಸಾಲದ ಮೊತ್ತದ ಮಿತಿಯನ್ನು ರೂ.3.00 ಲಕ್ಷಗಳಿಂದ ರೂ.5.00 ಲಕ್ಷಕ್ಕೆ ಹೆಚ್ಚಿಸಲು ಹಾಗೂ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಮೊತ್ತದ ಮಿತಿಯನ್ನು ರೂ.10.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸಲು ಘೋಷಿಸಲಾಗಿದೆ. |

| | | |
|---|---|---|
| ಇ) | ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ಗಳು ರೈತರಿಗೆ ಸಾಲ ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | **ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ರೈತರಿಗೆ ಸಾಲ ನೀಡಲು ಅನುಸರಿಸುತ್ತಿರುವ ಮಾನದಂಡಗಳ ವಿವರ ಈ ಕೆಳಗಿನಂತಿದೆ.**<br>ಕೃಷಿಗೆ ಸಂಬಂಧಪಟ್ಟಂತೆ ಬ್ಯಾಂಕುಗಳು ನೇರವಾಗಿ ಫಲಾನುಭವಿಗಳಿಗೆ ಸಾಲ ವಿತರಿಸದೇ ಬ್ಯಾಂಕಿಗೆ ಸದಸ್ಯತ್ವ ಪಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖಾಂತರ ಸಾಲ ವಿತರಿಸುವ ಪದ್ಧತಿ ಜಾರಿಯಲ್ಲಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ತನ್ನ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿನ ರೈತರಿಗೆ ಬೆಳೆಸಾಲ ವಿತರಿಸಲು ವಿಧಿಸುತ್ತಿರುವ ಮಾನದಂಡಗಳು ಈ ಕೆಳಗಿನಂತಿರುತ್ತವೆ.<br>• ರೈತ/ಸದಸ್ಯ ಕೃಷಿ ಭೂಮಿ ಹೊಂದಿರಬೇಕು.<br>• ಸಂಘದ ಕಾರ್ಯವ್ಯಾಪ್ತಿಯಲ್ಲಿ ವಾಸವಾಗಿರಬೇಕು.<br>• ಸಂಘದ ಸದಸ್ಯತ್ವ ಪಡೆದಿರಬೇಕು.<br>• ಸರ್ಕಾರ ನಿಗಧಿಗೊಳಿಸುವ ಬೆಳೆವಾರು ಸ್ಕೇಲ್ ಆಫ್ ಫೈನಾನ್ಸ್ ಆಧಾರದಂತೆ ಸಾಲ ವಿತರಿಸಲಾಗುವುದು.<br>• ಸಾಲ ಮಂಜೂರಾತಿಗಾಗಿ ಕ್ರಮಿಕ ಪತ್ತಿನ ತಃಖ್ತೆ ಸಲ್ಲಿಸಿ ಮಂಜೂರಾತಿ ಪಡೆಯುವುದು.<br>• ಕೃಷಿ ಭೂಮಿಯನ್ನು ಪ್ಯಾಕ್ಸ್‌ಗಳ ಹೆಸರಿಗೆ ಮಾರ್ಟ್‌ಗೇಜ್ ಮಾಡಿಸುವುದು.<br>• ಸಾಲ ಮಂಜೂರು ಸಂದರ್ಭದಲ್ಲಿ ಸಾಲದ ಮೊತ್ತಕ್ಕೆ ಶೇ. 10 ಪ್ರತಿಶತ ಹೆಚ್ಚುವರಿ ಷೇರು ಹಣ ಪಡೆಯುವುದು.<br>• ಬೆಳೆಸಾಲ ಪಡೆದ ಸದಸ್ಯರಿಗೆ ಸರ್ಕಾರದ ಬೆಳೆವಿಮೆಗೆ ಆಯ್ಕೆಯಾದ ಬೆಳೆಗಳಿಗೆ ಬೆಳೆವಿಮೆ ಯೋಜನೆಗೆ ಒಳಪಡಿಸುವುದು.<br>• ಮಧ್ಯಮಾವಧಿ ಕೃಷಿಸಾಲ ವಿತರಿಸಿದ್ದಲ್ಲಿ ಯಂತ್ರೋಪಕರಣಗಳಿಗೆ ಮತ್ತು ಪಶುಗಳಿಗೆ ವಿಮೆ ಯೋಜನೆಯಡಿಯಲ್ಲಿ ವಿಮೆ ಮಾಡಿಸುವುದು. |

**ಸಂಖ್ಯೆ: ಸಿಒ 139 ಸಿಎಲ್ಎಸ್ 2023**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**